ಮಾಡಿದ್ದಾರೆ ಅದನ್ನು ನನಗೆ ಕೊಟ್ಟರೆ, ಅದಕ್ಕೆ ಯಾವ ರೀತಿಯಾಗಿ ಹಣವನ್ನು ಮಂಜೂರಾತಿ ಮಾಡಿಕೊಡುತ್ತೇನೆ.

ರಾಜ್ಯದಲ್ಲಿರುವ ಭಿಕ್ಷುಕರ ಪುನರ್ವಸತಿ ಕೇಂದ್ರಗಳು

49(393) ಶ್ರೀ ಬಂಡೆಪ್ಪ ಕಾಶೆಂಪೂರ್:(ಬೀದರ್ ದಕ್ಷಿಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭಿಕ್ಷುಕರ ಪುನರ್ವಸತಿ ಕೇಂದ್ರಗಳ ಸಂಖ್ಯೆ ಎಷ್ಟು, ಯಾವುವು ಮತ್ತು ಎಲ್ಲಿವೆ ಪೂರ್ಣ ಮಾಹಿತಿಯನ್ನು ನೀಡುವುದು

ಆ) ಈ ಪುನರ್ವಸತಿ ಕೇಂದ್ರಗಳು ಸುಸಜ್ಜಿತವಾಗಿಯೇ;

ಇ) ಭಿಕ್ಷುಕರುಗಳಿಗೆ ಪುನರ್ವಸತಿ ಕೇಂದ್ರಗಳಲ್ಲಿ ಯಾವ ರೀತಿಯ ಕುಶಲ ಕಲೆಗಳನ್ನು ಕಲಿಸಲಾಗುತ್ತಿದೆ;

ಈ) ಇವರುಗಳಿಗೆ ಈ ಕೇಂದ್ರಗಳಲ್ಲಿ ನೀಡುತ್ತಿರುವ ಮೂಲಸೌಲಭ್ಯಗಳೇನು; ವಿವರಗಳನ್ನು ನೀಡುವುದು;

ಉ) ಈ ಪುನರ್ವಸತಿ ಕೇಂದ್ರಗಳಲ್ಲಿ ಎಷ್ಟು ಜನ ಭಿಕ್ಷುಕರುಗಳಿದ್ದಾರೆ; ಕೇಂದ್ರವಾರು ವಿವರಗಳನ್ನು ನೀಡುವುದು;

ಊ) ಈ ಪುನರ್ವಸತಿ ಕೇಂದ್ರಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ನೀಡುತ್ತಿರುವ ಅನುದಾನದ ಮೊತ್ತ ಎಷ್ಟು; ವಿವರಗಳನ್ನು ನೀಡುವುದು;

ಶ್ರೀ ಡಿ ಸುಧಾಕರ(ಸಮಾಜ ಕಲ್ಯಾಣ ಸಚಿವರು):

ಅ) ಒಟ್ಟು 14. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಹೌದು.

ಇ) ಹೊಲಿಗೆ ಕಮ್ಮಾರಿಕೆ, ನೇಯ್ಗೆ, ಬಡಗಿ, ಬೆತ್ತ, ತೆಂಗಿನ ನಾರಿನ ಮ್ಯಾಟ್ ತಯಾರಿಕೆ, ಬುಕ್‌ಬೈಡಿಂಗ್, ಫೆನಾಯಿಲ್ ತಯಾರಿಕೆ, ಫೈಲ್‌ರ್‍ಯಾಪರ್ ತಯಾರಿಕೆ ಮತ್ತು ತೋಟಗಾರಿಕೆಗಳಲ್ಲಿ ತರಬೇತಿ ನೀಡಲಾಗುತ್ತಿದೆ

ಈ) ಪ್ರತಿ ದಿನ ಬೆಳಗಿನ ಉಪಹಾರ, ಕಾಫಿ ಹಾಗೂ ಮಧ್ಯಾಹ್ನ ಮತ್ತು ರಾತ್ರಿ ಊಟ ಸಮವಸ್ತ್ರ, ಹಾಸಿಗೆ-ಹೊದಿಕೆ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ.

ಉ)

ಕ್ರ ಸ ಂ	ನಿ.ಪ.ಕೇಂದ್ರ	ನಿರಾಶ್ರಿತರ ಸಂಖ್ಯೆ	ಕ್ರ ಸಂ	ನಿ.ಪ.ಕೇಂದ್ರ	ನಿರಾಶ್ರಿತರ ಸಂಖ್ಯೆ
1	ಬೆಂಗಳೂರು	2042	8	ಹು–ಧಾರವಾಡ	161
2	ಬಳ್ಳಾರಿ	55	9	ಕೋಲಾರ	4
3	ಬಿಜಾಪುರ	30	10	ಮೈಸೂರು	247
4	ಬೆಳಗಾವಿ	23	11	ಮಂಗಳೂರು	113
5	ಚಿತ್ರದುರ್ಗ	95	12	ರಾಯಚೂರು	24
6	ದಾವಣಗೆರೆ	83	13	ಶಿವಮೊಗ್ಗ	73
7	ಗುಲ್ಬರ್ಗಾ	15	14	ತುಮಕೂರು	41

ಊ) ಈ ಸಂಸ್ಥೆಗೆ ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುವುದಿಲ್ಲ.

ಈ ಸಮಿತಿಗೆ ಸ್ಥಳೀಯ ಸಂಸ್ಥೆಗಳು ಭೀಕ್ಷುಕರ ಕರ ಎಂದು ವಸೂಲಿಸಿ ಪಾವತಿಸುವ ಹಣದಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ನಿರ್ವಹಿಸಲಾಗುತ್ತಿದೆ.

ಅನುಬಂಧ

ರಾಜ್ಯದಲ್ಲಿರುವ 14 ನಿರಾಶ್ರಿತರ ಪರಿಹಾರ ಕೇಂದ್ರಗಳ ವಿಳಾಸ

1	ನಿರಾಶ್ರಿತರ ಪರಿಹಾರ ಕೇಂದ್ರ ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ, **ಬೆಂಗಳೂರು–560091**	2	ನಿರಾಶ್ರಿತರ ಪರಿಹಾರ ಕೇಂದ್ರ, ಅಫ್ಜಲ್‌ಪುರ, ಟಕ್ಕೆ ರಸ್ತೆ, **ವಿಜಾಪುರ ಜಿಲ್ಲೆ.**
3	ನಿರಾಶ್ರಿತರ ಪರಿಹಾರ ಕೇಂದ್ರ, ಬಂಡ್ಡಿಹಟ್ಟಿ, ಆಲದಹಳ್ಳಿ, ಕೌಲ್	4	ನಿರಾಶ್ರಿತರ ಪರಿಹಾರ ಕೇಂದ್ರ ಮುಖಾಂ ಪೋಸ್ಟ್, ಮಚ್ಚೆ

	ಬಜಾರ್, **ಬಳ್ಳಾರಿ ಜಿಲ್ಲೆ**		ತಾಲ್ಲೂಕು, **ಬೆಳಗಾವಿ ಜಿಲ್ಲೆ.**
5	ನಿರಾಶ್ರಿತರ ಪರಿಹಾರ ಕೇಂದ್ರ, ಗೋನೂರು ಅಂಚೆ, ಹೂಚಿ ಬೋರಯ್ಯ ಲೇಔಟ್, ಚಿತ್ರದುರ್ಗ (ತಾ), **ಚಿತ್ರದುರ್ಗ.**	6	ನಿರಾಶ್ರಿತರ ಪರಿಹಾರ ಕೇಂದ್ರ, ತುರುಚಿಘಟ್ಟ, ಗೋಮಾಳ, ಬೆಳವನೂರ್ ಪೋಸ್ಟ್, **ದಾವಣಗೆರೆ–577002**
7	ನಿರಾಶ್ರಿತರ ಪರಿಹಾರ ಕೇಂದ್ರ, ಬಿದ್ದಾಪುರ್ ಕಾಲೋನಿ, ಗಬ್ಬೂರ್ ರಸ್ತೆ, **ಗುಲ್ಬರ್ಗ – 585105**	8	ನಿರಾಶ್ರಿತರ ಪರಿಹಾರ ಕೇಂದ್ರ, ರಾಯಪುರ, ಹುಬ್ಬಳ್ಳಿ–ಧಾರವಾಡ, **ಧಾರವಾಡ – 580009**
9	ನಿರಾಶ್ರಿತರ ಪರಿಹಾರ ಕೇಂದ್ರ, ಟಮಕ ಪೋಸ್ಟ್, ರಾಷ್ಟ್ರೀಯ ಹೆದ್ದಾರಿ, ಬೈಪಾಸ್, **ಕೋಲಾರ – 563101**	10	ನಿರಾಶ್ರಿತರ ಪರಿಹಾರ ಕೇಂದ್ರ, ಜ್ಯೋತಿನಗರ, **ಮೈಸೂರು–570019**
11	ನಿರಾಶ್ರಿತರ ಪರಿಹಾರ ಕೇಂದ್ರ, ಪಚ್ಚನಾಡಿ ಗ್ರಾಮ, ವಾಮಂಜೂರ್ ಅಂಚೆ ಮಂಗಳೂರು, **ದಕ್ಷಿಣ ಕನ್ನಡ ಜಿಲ್ಲೆ**	12	ನಿರಾಶ್ರಿತರ ಪರಿಹಾರ ಕೇಂದ್ರ, ಆಶಾಪುರ್ ರಸ್ತೆ, ದೂರದರ್ಶನ ಕೇಂದ್ರದ ಹತ್ತಿರ, **ರಾಯಚೂರು ಜಿಲ್ಲೆ.**
13	ನಿರಾಶ್ರಿತರ ಪರಿಹಾರ ಕೇಂದ್ರ, ತ್ಯಾವರೆಕೊಪ್ಪ, ಸಾಗರ ರಸ್ತೆ, **ಶಿವಮೊಗ್ಗ ಜಿಲ್ಲೆ.**	14	ನಿರಾಶ್ರಿತರ ಪರಿಹಾರ ಕೇಂದ್ರ, ಬಸವರಾಜ ಬಿಲ್ಡಿಂಗ್, ಹೆಗ್ಗೆರೆ, ಸಿದ್ಧಾರ್ಥನಗರ, **ತುಮಕೂರು ಜಿಲ್ಲೆ.**

Annexure

Address of Nirashrithara Parihara Kendra's in the State

1	Nirashrithara Parihara	2	Nirashrithara Parihara

	Kendra, Magadi Main Road, Vishwaneedam Post, **Bangalore-91**		Kendra, Afzalpur, Takke Road, **Bijapur.**
3	Nirashrithara Parihara Kendra, Bandihatti, Aladhahalli, Kaul bazer, **Bellary.**	4	Nirashrithara Parihara Kendra, Mukam Post, Mache Taluk, **Belgaum.**
5	Nirashrithara Parihara Kendra, Gonooru Post, Hoochi Boraiah Layout, Chitradurga (T), **Chitradurga-577502**	6	Nirashrithara Parihara Kendra, Thurchighatta, Gomala, Belavanur Post, **Davanagere – 577002**
7	Nirashrithara Parihara Kendra, Biddapur Colony, Gabbur Road, **Gulbarga-585105**	8	Nirashrithara Parihara Kendra, Rayapura, Hubli-**Dharwad-580009**
9	Nirashrithara Parihara Kendra, Tamaka Post, National Highway, Byepass, Opp.Industrial Area, **Kolar-563101**	10	Nirashrithara Parihara Kendra, Jyothinagar, **Mysore-570019**
11	Nirashrithara Parihara Kendra, Pachandi Village, Vamanjor Post, Mangalore, **Dakshna Kannada**	12	Nirashrithara Parihara Kendra,Ashapur road, Near T.V.Station, **Raichur.**
13	Nirashrithara Parihara	14	Nirashrithara Parihara

	Kendra, Thyavarekoppa Village, Sagar Road, Kotegangoor Post, **Shimoga**		Kendra, Basavaraja Building, Heggere, Siddarthanagar Post, **Tumkur**

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಂಡೆಪ್ಪ ಕಾಶಂಪುರ್ (ಬೀದರ್) (ದಕ್ಷಿಣ), ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 393 ಕ್ಕೆ ಪೂರಕ ಟಿಪ್ಪಣಿ:–

ಕರ್ನಾಟಕ ಭಿಕ್ಷಾಟನಾ ನಿಷೇಧ ಕಾಯಿದೆ ಸೆಕ್ಷನ್ 3 ರನ್ವಯ ರಾಜ್ಯದಲ್ಲಿ ಬೀಕ್ಷಾಟನೆಯನ್ನು ನಿಷೇಧಿಸಲಾಗಿದೆ. ಆ ಮೇರೆಗೆ ಮಕ್ಕಳನ್ನು ಹೊರತುಪಡಿಸಿ ಭಿಕ್ಷೆಯಾಚಿಸುವ ಭಿಕ್ಷುಕರನ್ನು ಪೊಲೀಸ್, ಆಯುಕ್ತರು, ಮಹಾನಗರ ಪಾಲಿಕೆ ಮತ್ತು ನಗರಸಭೆಗಳು, ಮುಖ್ಯಾಧಿಕಾರಿಗಳು, ಪುರಸಭೆ, ಪಟ್ಟಣ ಪಂಚಾಯತಿಗಳು, ಜಿಲ್ಲಾ ಸಮಾಜಕಲ್ಯಾಣಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ನಿರಾಶ್ರಿತರ ಪರಿಹಾರ ಕೇಂದ್ರಗಳ ಅಧೀಕ್ಷಕರು ಹಾಗೂ ಕೇಂದ್ರ ಪರಿಹಾರ ಸಮಿತಿಯ ಕಾರ್ಯದರ್ಶಿಗಳು ಭಿಕ್ಷುಕರನ್ನು ಬಂಧಿಸುವ ಅಧಿಕಾರ ಹೊಂದಿರುತ್ತಾರೆ. ಬಂಧಿತ ಭಿಕ್ಷುಕರನ್ನು ಪ್ರಾಥಮಿಕ ತನಿಖೆ ನಡೆಸಿದ ನಂತರ ತಾಲ್ಲೂಕು ದಂಡಾಧಿಕಾರಿಗಳ ಮುಂದೆ ಹಾಜರುಪಡಿಸಿ ಬಂಧನದ ಅವಧಿಯನ್ನು ನಿಗದಿಪಡಿಸಿದ ನಂತರ ನಿರಾಶ್ರಿತರ ಪರಿಹಾರ ಕೇಂದ್ರಗಳ ರಕ್ಷಣೆಯಲ್ಲಿ ಕನಿಷ್ಟ 1 ವರ್ಷ ಗರಿಷ್ಟ 3 ವರ್ಷಗಳ ರಕ್ಷಣೆಯಲ್ಲಿ ಇರಿಸಲಾಗುತ್ತಿದೆ.

ಬಂಧನದ ಅವಧಿಯಲ್ಲಿ ನಿರಾಶ್ರಿತರನ್ನು (ಭಿಕ್ಷುಕರಿಗೆ) ಉಚಿತ ವಸತಿ, ಉಪಹಾರ ಮತ್ತು ಊಟ ಹಾಗೂ ಸಮವಸ್ತ್ರ, ಹಾಸಿಗೆ–ಹೊದಿಕೆಗಳನ್ನು ಒದಗಿಸಲಾಗುತ್ತಿದೆ ಮತ್ತು ಉಚಿತ ವೈದ್ಯಕೀಯ ಸೌಲಭ್ಯ ನೀಡಲಾಗುತ್ತಿದೆ, ಅಲ್ಲದೇ ಪುನರ್ವಸತಿ ಕಾರ್ಯಕ್ರಮಗಳ ಅಡಿಯಲ್ಲಿ ತರಭೇತಿಗಳನ್ನು ನೀಡಲಾಗುತ್ತಿದೆ. ಪ್ರಸ್ತುತ ರಾಜ್ಯದ ಕೆಳಕಂಡ ಜಿಲ್ಲೆಗಳಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಮೇಲ್ಕಂಡ 14 ನಿರಾಶ್ರಿತರ ಪರಿಹಾರ ಕೇಂದ್ರಗಳ ಪೈಕಿ ತುಮಕೂರು ಮತ್ತು ಕೋಲಾರ ನಿರಾಶ್ರಿತರ ಪರಿಹಾರ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು. ಉಳಿಕೆ 12 ನಿರಾಶ್ರಿತರ ಪರಿಹಾರ ಕೇಂದ್ರಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು. ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಪುನರ್ವಸತಿ ಕಾರ್ಯಕ್ರಮಗಳ ಅಡಿಯಲ್ಲಿ ಬೆಂಗಳೂರು, ದಾವಣಗೆರೆ. ಹುಬ್ಬಳ್ಳಿ–ಧಾರವಾಡ, ಮಂಗಳೂರು ಮತ್ತು ಮೈಸೂರು ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ವೃತ್ತಿ ತರಬೆತಿಗಳಾದ ಟೈಲರಿಂಗ್, ಬುಕ್‌ಬೈಂಡಿಂಗ್, ಬಡಗಿ, ಕಮ್ಮಾರಿಕೆ, ಫೆನಾಯಿಲ್ ತಯಾರಿಕೆ, ಫೈಲ್‌ರೈಪರ್ ತಯಾರಿಕೆ, ನೇಯ್ಗೆ, ತೆಂಗಿನನಾರಿನ ಮ್ಯಾಟ್ ತಯಾರಿಕೆ, ಬೆತ್ತದ ಹೆಣಿಗೆ ಮತ್ತು ತೋಟಗಾರಿಕೆಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಸ್ಥಳೀಯ ಸಂಸ್ಥೆಗಳಾದ ಮಹಾನಗರಪಾಲಿಕೆಗಳು, ನಗರಪಾಲಿಕೆಗಳು, ಪುರಸಭೆಗಳು, ಮತ್ತು ಪಟ್ಟಣ ಪಂಚಾಯತಿಗಳು ಭೂಮಿ ಮತ್ತು ಕಟ್ಟಡಗಳ ಮೇಲೆ ವಿಧಿಸುವ ತೆರಿಗೆಗಳಲ್ಲಿ ಶೇಕಡ 3 ರ ಭಿಕ್ಷುಕರ ಕರವನ್ನು ವಸೂಲಿಸಿ, ಪಾವತಿಸುವ ಭಿಕ್ಷುಕರ ಕರದಲ್ಲಿ ಈ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ನಿರ್ವವಹಿಸಲಾಗುತ್ತಿದೆ. ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ನಿರ್ವಹಿಸಲು ಕೇಂದ್ರ ಅಥವಾ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ.

ಕೇಂದ್ರ ಪರಿಹಾರ ಸಮಿತಿಯ 2010–11ನೇ ಸಾಲಿನಲ್ಲಿ ನಿಗದಿಪಡಿಸಲಾದ ಅಯವ್ಯಯದ ವಿವರ ಕೆಳಕಂಡಂತಿದೆ

ನಿರೀಕ್ಷಿತ ಆದಾಯ	ರೂ.2057.00 ಲಕ್ಷಗಳು
ನಿರೀಕ್ಷಿತ ವೆಚ್ಚ	ರೂ.1857.00 ಲಕ್ಷಗಳು

Supplementary Note for the Starred Question No.393 by Sri. Bandeppa Kashempur, (Bidar) (South), Hon'ble member of the Legislative Assembly.

Begging is prohibited as per section 3 of the Karnataka Prohibition of Beggary act 1975. If a person other than child found begging he will be arrested under section 11 sub section (1). The police officers, The Superintendent of Nirashrithara Parihara Kendra's, Secretary, Central Relief Committee, Commissioners of the Corporations and City Municipal Councils and Chief Officers of the Town Municipal Council, DSW, to the nearest Receiving centres. After an enquiry he will produced before a Taluka Magistrate or Judicial Magistrate or Metropolitan Magistrate. The Magistrate after an enquiry will order for detention of begger in the Nirashrithara Parihara Kendras for a period of not less than One year and not more than Three years. The detained persons in the Nirashrithara Parihara Kendra is being provided with shelter, food, bedding, uniforms and other facilities including medical examinations and training programmes free of cost .

The Karnataka Prohibition of Beggary Act 1975 has been enacted to prohibit Beggary in the State and this Act initially has brough it to force in the areas comprised in the Corporations shown below with effect from 10-01-1976.

1	Bangalore City Corporation
2	Belgaum City Corporation3
3	Hubli-Dharwad City Corporation
4	Mysore City Corporation
5	Mangalore City Corporation
6	Gulbarga City Corporation

7	Davanagere City Corporation
8	Shimoga City Corporation
9	Bijapur City Corporation
10	Bellary City Corporation

Further the Government of Karnataka has extended the Act, to the rest of the areas of the State with effect form 28-08-1997. Further the Government in Order No.SWD 7 SBR 99 dt: 29-04-2000 have sanctioned new Nirashrithara Parihara Kendras in:-

1	Kolar	3	Chitradurga
2	Tumkur	4	Raichur

these Centres are functioning from 2001. Twelve Nirashrithara Parihara Kendras have own buildings with basic infrastructure facilities except Tumkur and Kolar centres. Now the own building in Tumkur and Kolar are under the completion stage.

The detained person (Beggers) in the Nirashrithara Parihara Kendras are being provided with free shelter, a breakfast, weekly thricfe eggs and bananas are being provide with meals and 3 sets of uniforms, I set of bedding and free medical treatment are given to them.

The detained beggars in Bangalore, Davanagere, Hubbli-Dharwad, Mangalore and Mysore Nirashrithara Parihara Kendra's have been given Vocational training programme in various trades like Tailoring Bookbinding, Blacksmithy, coirmat making, phenyle making , File

wrapper making , Weaving Ratton and Horticulture as a part of rehabilitation programme.

Source fo revenue for the maintenance of these Beggar Homes is Beggary cess only 3% of Beggary cess from the Local authorities , i.e. Mahanagara palike, City Corporations, City Municipal Council, Town Mnicipalities, Urban development authorities and Gram Panchayaths. The Beggary cess will be levied and collected on the Land and Buildings. No Budget earmarked in the State or Central Government Budget.

Budget of the Central Relief Committee for the year 2010-11 as detailed below:-

Estimated Incom	Rs.2057.00 Lakhs
Estimated Expenditure	Rs.1857.00 Lakhs

ಶ್ರೀ ಬಂಡೆಪ್ಪ ಕಾಶೆಂಪುರ್: ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ, ಈಗ ಇರುವ ಮೂಲ ಚಿಂತೆ ಏನೇಂದರೆ, ಈ ರಾಜ್ಯದಲ್ಲಿ 14 ಭಿಕ್ಷುಕರರ ಪುನರ್ವಸತಿ ಕೇಂದ್ರಗಳಿದ್ದಾವೆಂದು ಹೇಳಿದ್ದಾರೆ. 1975ರಲ್ಲಿ ಈ ಕಾಯಿದೆ ಜಾರಿಗೆ ಬಂದು, ಆಗ ಕಾರ್ಪೋರೇಷನ್ ಲೆವೆಲ್‌ನಲ್ಲಿತ್ತು. ಆಮೇಲೆ ಇಡೀ ರಾಜ್ಯಕ್ಕೆ 1997 ರಲ್ಲಿ ಅನ್ವಯಿಸಿದರು. ಹಾಗಾಗಿ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಇನ್ನು ಅವರು ಜಿಲ್ಲಾವಾರು ಮಾಡಿಲ್ಲ, ಇವತ್ತು ಈಡೀ ರಾಜ್ಯದಲ್ಲಿ ಭಿಕ್ಷಾಟನೆ ನಿಷೇಧ ಮಾಡಬೇಕೆಂದು ಈ ಕಾಯಿದೆ ಹೇಳುತ್ತದೆ. ಎಲ್ಲಿಯೂ ಭಿಕ್ಷುಕರು ಭಿಕ್ಷಾಟನೆ ಮಾಡಬಾರದು, ಸಂಪೂರ್ಣವಾಗಿ ಸರ್ಕಾರ ಅವರ ಪುನರ್ವಸತಿ ಮಾಡಬೇಕೆನ್ನುವ ನಿಟ್ಟಿನಲ್ಲಿ ಚಿಂತನೆ ಮಾಡಬೇಕು. ಇವತ್ತು ಇರುವುದು ಬರೀ 14 ಕೇಂದ್ರಗಳು, ಅದರಲ್ಲಿ ಬೆಂಗಳೂರಿನಲ್ಲಿ ಸುಮಾರು 2042 ಭಿಕ್ಷುಕರಿದ್ದಾರೆಂದು ಮಾಹಿತಿ ಕೊಟ್ಟಿದ್ದಾರೆ. ಹಾಗಾಗಿ ಇಷ್ಟೋಂದು ದೊಡ್ಡ ಸಂಖ್ಯೆಯಲ್ಲಿನ ಜನರಿಗೆ ಪುನರ್ವಸತಿ ಯಾವ ರೀತಿ ಆಗುತ್ತಿದೆ, ನಮಗಿರುವ ಚಿಂತನೇ ಏನೇಂದರೆ, ಇಡೀ ರಾಜ್ಯದಲ್ಲಿ ಮೊದಲನೇ ಹಂತದಲ್ಲಿ 30 ಜಿಲ್ಲೆಗಳಲ್ಲಿ

ಅವರ ಪುನರ್ವಸತಿಯಾಗಬೇಕು. ಆಮೇಲೆ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಬೆಂಗಳೂರಿನಿಂದ–ಬೀದರ್‌ವರೆಗೆ ಇದಕ್ಕಾಗಿ ಮುನಿಸಿಪಾಲಿಟಿಯಾಗಲಿ, ಪಟ್ಟಣ ಪಂಚಾಯತಿಗಳಲ್ಲಾಗಲಿ 3% ಸೆಸ್ ಕಲೆಕ್ಟ್ ಆಗುತ್ತಿದೆ. ಹಾಗಾಗಿ ಇವತ್ತು 20 ಕೋಟಿ 57 ಲಕ್ಷ ಇದರಿಂದ ಆದಾಯ ಬರುತ್ತಿದೆಯೆಂದು ಹೇಳುತ್ತಿದ್ದಾರೆ, 18 ಕೋಟಿ ಖರ್ಚಾಗುತ್ತಿದೆ, ಅದು ಎಲ್ಲಿ ಹೋಗುತ್ತಿದೆಯೋ ಗೊತ್ತಾಗುತ್ತಿಲ್ಲ. ಆದುದರಿಂದ ಸ್ಪಷ್ಟವಾಗಿ ಹೇಳಬೇಕು, ಹೊರಗಡೆ ದೇವಸ್ಥಾನಗಳಿಗೆ ಹೋದರೆ ನೂರಾರು ಭಿಕ್ಷಕುಕರಿರುತ್ತಾರೆ. ಅವರು ಬಹಳ ನೊಂದು ಬಹಳಷ್ಟು ಸಮಸ್ಯೆಯಲ್ಲಿರುತ್ತಾರೆ, ಸರ್ಕಾರ ಇವರ ನೆರವಿಗೆ ಧಾವಿಸಿ, ಇವರ ಬಗ್ಗೆ ಚಿಂತನೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಸ್ಪಷ್ಟವಾಗಿ ಉತ್ತರ ಬಯಸುತ್ತೇನೆ.

ಶ್ರೀ ಡಿ ಸುಧಾಕರ್: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ 14 ಕಡೆ ಈ ಭಿಕ್ಷುಕರ ಪುನರ್ವಸತಿ ಕೇಂದ್ರಗಳಿವೆ. ಅದೇ ರೀತಿಯಾಗಿ ಉಳಿದ ಜಿಲ್ಲೆಗಳಲ್ಲೂ ಕೂಡ ಇದರ ಅವಶ್ಯಕತೆ ಇದೆ. ಆ ಒಂದು ಆಧಾರದ ಮೇಲೆ ಈಗಾಗಲೇ ಕಾನೂನು ಮಾಡುವುದಕ್ಕೆ ಕ್ರಮ ಕೂಡ ತೆಗೆದು ಕೊಂಡಿದ್ದೇವೆ, ಜೊತೆಯಲ್ಲಿ ಈಗಾಗಲೇ ಬೀದರ್ ಜಿಲ್ಲೆಯಲ್ಲಿ 2 ಎಕರೆ ಜಾಗವನ್ನು ಪುನರ್ವಸತಿ ಕೇಂದ್ರ ಮಾಡಲು ಜಿಲ್ಲಾದಿಕಾರಿಗಳು ಕೊಟ್ಟಿದ್ದಾರೆ, ಅಲ್ಲೂ ಕೂಡ ಪ್ರಾರಂಭ ಮಾಡುತ್ತೇವೆ. ಜೊತೆಗೆ ಜಿಲ್ಲೆಗಳಿಗೆ ಸಂಬಂಧಿಸಿದ ನಿರಾಶ್ರಿತರು ಸಾಲ ಮತ್ತು ಇತರೇ ಸೌಲಭ್ಯಗಳನ್ನು ಕೇಳಿದರೆ, ಕೊಡಲು ಪ್ರಾಮುಖ್ಯತೆಯನ್ನು ಈಗಾಗಲೇ ಕೊಡುತ್ತಿದ್ದೇವೆ. ಅದೇ ರೀತಿಯಾಗಿ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಕೂಡ ಮುಂದಿನ ದಿವಸಗಳಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಇದನ್ನು ಎಷ್ಟು ದಿವಸಗಳಲ್ಲಿ ಎನ್ಫೋರ್ಸಿಗೆ ತರುತ್ತಿರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಡಿ ಸುಧಾಕರ್: ಭಿಕ್ಷುಕರು ಹೆಚ್ಚಾಗಿ ಬೆಂಗಳೂರು ನಗರದಲ್ಲಿದ್ದಾರೆ, ಈಗಾಗಲೇ ಈ ಬಗ್ಗೆ ದೊಡ್ಡ ಆಂದೋಲನವನ್ನು ಪ್ರಾರಂಬಿಸಿ ಕಳೆದ 2–3 ತಿಂಗಳಲ್ಲಿ ಸುಮಾರು 2,000 ಜನ ಭಿಕ್ಷುಕರನ್ನು ಬಂಧಿಸಿ ಅವರಿಗೆ ಪುನರ್ವಸತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದರ ಜೊತೆಗೆ ಬೇರೆ ಜಿಲ್ಲೆಗಳಲ್ಲಿ

ಸಹ ಈ ಒಂದು ಕಾರ್ಯಕ್ರಮವನ್ನು ಹಂತ ಹಂತವಾಗಿ ಹಣದ ಲಭ್ಯತೆ ಮೇಲೆ ನಾವು ಪ್ರಾರಂಭ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಪ್ರಾಥಮಿಕ ಆರೋಗ್ಯ ಘಟಕಗಳನ್ನು ಆರೋಗ್ಯ ಕೇಂದ್ರಗಳಾಗಿ ಪರಿವರ್ತಿಸುವ ಬಗ್ಗೆ.

50 (308) ಶ್ರೀ ಮಹದೇವಪ್ರಸಾದ ಹೆಚ್ ಎಸ್:(ಗುಂಡ್ಲುಪೇಟೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಆರೋಗ್ಯ ಘಟಕಗಳನ್ನು ಆರೋಗ್ಯ ಕೇಂದ್ರಗಳಾಗಿ ಪರಿವರ್ತಿಸಲಾಗಿದೆಯೇ

ಆ) ಹಾಗಿದ್ದಲ್ಲಿ, ಅವುಗಳಿಗೆ ಅಗತ್ಯವಾದ ವೈದ್ಯಾಧಿಕಾರಿ, ಸಿಬ್ಬಂದಿ ನೇಮಕ, ಕಟ್ಟಡ ನಿರ್ಮಾಣ, ಇತರೆ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆಯೇ;

ಶ್ರೀ ಬಿ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರಿ ಆದೇಶ ದಿನಾಂಕ:2-06-2007 ರಲ್ಲಿ ರಾಜ್ಯದಲ್ಲಿನ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಸದರಿ ಮೇಲ್ದರ್ಜೆಗೇರಿಸಲಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಔಷಧಿಗಳನ್ನು ಒದಗಿಸಲಾಗುತ್ತಿದೆ. ಮೇಲ್ದರ್ಜೆಗೇರಿಸಿದ್ದಕ್ಕೆ ಅನುಗುಣವಾಗಿ ಹೆಚ್ಚುವರಿಯಾಗಿ 3 ಅರೆ ವೈದ್ಯಕೀಯ ಸಿಬ್ಬಂದಿಯನ್ನು ನೀಡಬೇಕಾಗಿದ್ದು, ಶೇಕಡಾ 60 ರಷ್ಟು ಕಟ್ಟಡ ಕಾಮಗಾರಿಯು ಪೂರ್ಣಗೊಂಡ ನಂತರ ಭರ್ತಿ ಮಾಡುವ ಪ್ರಕ್ರಿಯೆ ಪ್ರಾರಂಭಿಸಬೇಕಾಗುತ್ತದೆ. ಪ್ರಸ್ತುತ ಇಂತಹ 45 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿವೆ.

ಶ್ರೀ ಹೆಚ್ ಎಸ್ ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ಈ ಹಿಂದೆ ರಾಜ್ಯ ಸರ್ಕಾರ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು, ಪ್ರಾಥಮಿಕ ಆರೋಗ್ಯ ಕೇಂದ್ರವೆಂದು ಮೇಲ್ದರ್ಜೆಗೆ ಏರಿಸಿ ಸುಮಾರು 2 ವರ್ಷಗಳಾಗಿದ್ದರೂ ಕೂಡ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಾಮಫಲಕ ಮಾತ್ರ ಬದಲಾವಣೆ